ಮುಂಚೆಯೇ ಪ್ರತಿತಿಂಗಳು ಬಾಡಿಗೆ ಪಾವತಿಸುತ್ತಿದ್ದುದರಿಂದ ಮತ್ತು ಮನೆ ಮಾಲೀಕ ದೂರದಲ್ಲಿದ್ದರಿಂದ ಬಾಡಿಗೆ ವಿಚಾರದಲ್ಲಿ ಅವರು ಫೋನ್ ಮಾಡಿ ಕಿರಿಕಿರಿ ಮಾಡಿರಲಿಲ್ಲ. ಆದರೂ ಸುಮ್ಮನಿರುವ ಹಾಗಿಲ್ಲ. ಈಗ ಸುಮ್ಮನಿರುವ ಅವರು ಮತ್ತೊಂದು ವಾರದ ಹೊತ್ತಿಗೆ ಸುಮ್ಮನಿರುತ್ತಾರೆಂಬ ಖಾತ್ರಿ ಇರಲಿಲ್ಲ.

ಈ ಚಿಂತೆಗಳಲ್ಲೇ ಮುಳುಗಿ ಯೋಚಿಸುತ್ತ ರಾತ್ರಿ ಮಲಗಿದವನಿಗೆ ಯಾವಾಗ ನಿದ್ದೆ ಆವರಿಸಿತೋ ಗೊತ್ತಿಲ್ಲ. ಬೆಳಗ್ಗೆ ಮೊಬೈಲ್ ಕರೆಯೊಂದು ಅಲರಾಮ್‌ನಂತೆ ಎಬ್ಬಿಸಿತು. 'ಇದ್ಯಾರಪ್ಪ ಬೆಳಗ್ಗೆ ಬೆಳಗ್ಗೆ' ಎಂದುಕೊಂಡು ಮೊಬೈಲ್ ಡಿಸ್‌ಪ್ಲೇ ನೋಡಿದವನಿಗೆ ಬಿರು ಬೇಸಿಗೆಯ ಬಿರುಕುಬಿಟ್ಟ ನೆಲದಲ್ಲಿ ಅಂತರ್ಜಲ ಉಕ್ಕಿದಷ್ಟು ಸಂತೋಷವಾಯಿತು. ಹೈದರಾಬಾದ್‌ನಿಂದ ಶೇಷಾಚಲಂರಾಜು ಫೋನ್ ಮಾಡಿದ್ದ. ಈ ಶೇಷಾಚಲಂರಾಜು ಯಾರು ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡಿರಬಹುದು. ಅವನು ನಾನು ಈ ಹಿಂದೆ ಹೈದರಾಬಾದ್ ಪ್ರಾಜೆಕ್ಟ್ ಒಂದರಲ್ಲಿ ಕೆಲಸ ಮಾಡಿದ್ದ ಕ್ಯಾಷಿಯರ್ ಕಮ್ ಇನ್‌ಚಾರ್ಜ್. ಅವನ ಫೋನ್ ಕಾಲ್ ನೋಡಿದೊಡನೆ ನಿಜಕ್ಕೂ ನನ್ನಲ್ಲಿ ಹೊಸ ಚೈತನ್ಯ ಮೂಡಿತು. ಅದಕ್ಕೆ ಕಾರಣವೂ ಇದೆ. ಪರ ರಾಜ್ಯದ ನಿರ್ಮಾಪಕರ ಆ ಪ್ರಾಜೆಕ್ಟ್‌ನಲ್ಲಿ ಅದನ್ನು ಒಪ್ಪಿಕೊಳ್ಳುವಾಗ ನಿರ್ಮಾಪಕರನ್ನು ಒಮ್ಮೆ ಮಾತಾಡಿಸಿ ನನ್ನ ಸಂಬಳ, ನನ್ನ ಮೂಲಭೂತ ಕೆಲ ಅಗತ್ಯಗಳನ್ನು ಚರ್ಚೆ ಮಾಡಲಾಗಿತ್ತು. ಅದಾದ ಬಳಿಕ ಆ ನಿರ್ಮಾಪಕನೊಂದಿಗೆ, ಆ ಕಂಪನಿಯವರೊಂದಿಗೆ ನಮ್ಮ ಬಳಕೆ ಅಷ್ಟಾಗಿ ಇರಲಿಲ್ಲ. ಪ್ರಾಜೆಕ್ಟ್ ನಡೆಯುವಾಗ ನಮ್ಮ ಹಾಗೂ ಕಂಪನಿಯ ನಡುವೆ ಸೇತುವೆಯಾಗಿದ್ದವನು ಈ ಕ್ಯಾಷಿಯರ್ ಶೇಷಾಚಲಂರಾಜು ಮಾತ್ರ. ಕೆಲಸಕ್ಕೂ ಮೀರಿ ನನಗೂ ಅವನಿಗೂ ಸ್ನೇಹ ಬೆಳೆದಿತ್ತು. ಕೆಲಸ ನಡೆಯುತ್ತಿದ್ದಾಗ ಕನಿಷ್ಠ ವಾರಕ್ಕೊಮ್ಮೆ ನಾನೂ ಅವನೂ ಮೈಸೂರು ರಸ್ತೆಯಲ್ಲಿರುವ ಒಂದು ರೆಸಾರ್ಟ್‌ನಲ್ಲಿ ಗುಂಡು ಹಾಕಲು ಸೇರುತ್ತಿದ್ದೆವು. ಇನ್ನೂ ಮದುವೆಯಾಗದ, ಮೇಲು ಸಂಪಾದನೆ ತಕ್ಕಮಟ್ಟಿಗೆ ಇದ್ದ ಅವನೇ ಹೆಚ್ಚು ಬಾರಿ ಬಾರಿನ ಬಿಲ್ ಪಾವತಿ ಮಾಡುತ್ತಿದ್ದ. ಅದಕ್ಕಿಂತ ಹೆಚ್ಚಾಗಿ ಒಡಹುಟ್ಟಿದ ಸೋದರನಿಗಿಂತಲೂ ಮಿಗಿಲಾಗಿ ನನ್ನನ್ನು ಕಾಣುತ್ತಿದ್ದ. ಹೀಗಾಗಿ ಅವನೆಂದರೆ ನನಗೂ ಅಚ್ಚುಮೆಚ್ಚು. ಪ್ರಾಜೆಕ್ಟ್ ಮುಗಿದ ದಿನ ಎಲ್ಲರಿಗಿಂತ ಹೆಚ್ಚಾಗಿ ನನ್ನ ಬಗ್ಗೆ ಮರುಕ ವ್ಯಕ್ತಪಡಿಸಿ, ''ಸಾರ್, ನಾನು ಬ್ಯಾಚುಲರ್ರು... ನನಗೇ ಒಂದು ಹದಿನೈದು ದಿನ ಕೆಲಸ ಇಲ್ಲಾಂದ್ರೆ, ತುಂಬಾ ಕಷ್ಟ ಆಗುತ್ತೆ, ಅಂತಾದ್ರಲ್ಲಿ ನೀವು ಫ್ಯಾಮಿಲಿ ಮ್ಯಾನ್... ನೀವು ಹೇಗ್ ಮಾಡ್ತೀರ ಸಾರ್? ನಮ್ಮ ಇಂಡಸ್ಟ್ರಿ ಸರಿ ಇಲ್ಲ ಸಾರ್... ಜಾಬ್ ಸೆಕ್ಯೂರಿಟಿ ಇಲ್ಲ... ನೀವೇನು ಯೋಚ್ನೆ ಮಾಡಬೇಡಿ, ನಿಮಗೆ ತೆಲುಗು ಸಹ ಚೆನ್ನಾಗಿ ಬರುತ್ತೆ; ನಾನೇ ನಿಮಗೆ ಅಲ್ಲೇನಾದ್ರೂ ಪ್ರಾಜೆಕ್ಟ್ ಸಿಗುತ್ತೇನೋ ನೋಡ್ತೀನಿ'' ಎಂದು ಹೋಗುವ ದಿನ ಹೇಳಿದ್ದ. ಆ ವಿಚಾರ ನೆನಪಾಗಿ ನನಗಾದ ಸಂತೋಷ ಅಷ್ಟಿಷ್ಟಲ್ಲ. ಬಹುಶಃ ರಾಜು ನನಗೋಸ್ಕರ ಯಾವುದೋ ತೆಲುಗು ಪ್ರಾಜೆಕ್ಟ್ ಹಿಡಿದಿರಬೇಕು ಎಂಬ ಆಸೆಯಿಂದ, ''ಹಲೋ'' ಎಂದು ಫೋನ್ ಕಿವಿಗಿಟ್ಟೆ.

''ನಮಸ್ಕಾರ ಸಾರ್, ಹೇಗಿದೀರ... ಯಾವುದಾದರೂ ಪ್ರಾಜೆಕ್ಟ್ ಕನ್‌ಫರ್ಮ್ ಆಯ್ತಾ ಸಾರ್'' ಎಂದು ವಿಚಾರಿಸಿಕೊಂಡ. 'ಇನ್ನೂ ಇಲ್ಲ' ಎಂದೊಡನೆ, ''ಒಳ್ಳೇದೇ ಆಯ್ತು ಬಿಡಿ, ನಮ್ಮ ಹಣೇಲಿ ಅದೃಷ್ಟದ ರೇಖೆ ಬರೆದಿರೋದು ಕನ್‌ಫರ್ಮ್ ಆಯ್ತು'' ಎಂದ. ಅವನ ಮಾತು ಕೇಳಿದಾಗ ಶೇಷು ನನಗಾಗಿ ಒಳ್ಳೆಯ ಪ್ರಾಜೆಕ್ಟ್ ಒಂದನ್ನು ಕೊಡಿಸ್ತಿದಾನೆ ಎಂಬ ನಂಬಿಕೆ ಬರತೊಡಗಿತು.